**ಪಾಠ–4** **ಅಕ್ಟೋಬರ್ 16–22**

# ನಿನ್ನ ಕರ್ತನಾದ ದೇವರನ್ನು ಪ್ರೀತಿಸುವುದು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಧರ್ಮೋಪದೇಶಕಾಂಡ 6:4,5, ಧರ್ಮೋಪದೇಶಕಾಂಡ 10:12, ಎಫೆಸದವರಿಗೆ 2:1–10; ಪ್ರಕಟನೆ 14:6,7, ಧರ್ಮೋಪದೇಶಕಾಂಡ 4:37, ಧರ್ಮೋಪದೇಶಕಾಂಡ 11:1, ಮಾರ್ಕ 12:28–30.

**ಸ್ಮರಣವಾಕ್ಯ :** "ನೀವು ನಿಮ್ಮ ದೇವರಾದ **ಯೆಹೋವನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ, ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು**" (ಧರ್ಮೋಪದೇಶಕಾಂಡ 6:5).

ಯೆಹೂದಿಯರ ಧರ್ಮದಲ್ಲಿ ಒಂದು ಪ್ರಾಮುಖ್ಯವಾದ ಪ್ರಾರ್ಥನೆಯನ್ನು ಧರ್ಮೋಪದೇಶಕಾಂಡ 6ನೇ ಅಧ್ಯಾಯದಿಂದ ತೆಗೆದುಕೊಂಡಿದೆ. ಇಬ್ರಿಯ ಭಾಷೆಯಲ್ಲಿ ಪ್ರಾರ್ಥನೆಯ ಮೊದಲನೆ ಪದ "ಶೆಮ" ಅದರ ಮೂಲ ಶಮ್ಮ ಅದರ ಅರ್ಥ "ಆಲಿಸು" ಅಥವಾ "ವಿಧೇಯನಾಗಿರು". ಬರಿ ಧರ್ಮೋಪದೇಶದಲ್ಲಿ ಮಾತ್ರವಲ್ಲ, ಆದರೆ ಹಳೆ ಒಡಂಬಡಿಕೆ ಉದ್ದಕ್ಕೂ ಈ ಪದವು ಪದೇ ಪದೇ ಮರುಕಳಿಸುತ್ತದೆ.

ಶೆಮ್ಮದ ಪ್ರಥಮ ಸಾಲಿನಲ್ಲಿ ಈ ರೀತಿ ಇದೆ:– "ಶೆಮ್ಮ ಇಸ್ರಾಯೇಲ್ ಅದೋ, ಏಲೋನಿ, ಅದೋನಿ ಇಕಾದ್".

---

* ಈ ವಾರದ ಪಾಠವನ್ನು ಅಕ್ಟೋಬರ್ 23ರ ಸಬ್ಬತ್ತಿಗಾಗಿ ಸಿದ್ಧಪಡಿಸಿಕೊಳ್ಳಿರಿ.

ಇದರ ಅರ್ಥ:– ಇಸ್ರಾಯೇಲ್ಯರೇ ಕೇಳಿರಿ; ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು (ಧರ್ಮೋಪದೇಶಕಾಂಡ 6:4).

ಅನೇಕ ಬಾರಿ ಯೆಹೂದಿಯರು ಪ್ರಾರ್ಥಿಸುವಾಗ ಅವರ ಕಣ್ಣುಗಳನ್ನು ಮುಚ್ಚಿಕೊಂಡಿರುತ್ತಾರೆ. ಅದರ ಉದ್ದೇಶ ದೇವರ ಕಡೆಯಿಂದ ಅವರ ಗಮನ ಬೇರೆ ಕಡೆ ತಿರುಗಬಾರದೆಂದು.

ಈ ಶೆಮ್ಮದ ಪ್ರಥಮ ಸಾಲಿನಲ್ಲಿ ಏಕದೇವರನ್ನೇ ದೃಢೀಕರಿಸುತ್ತದೆ. ಅದೋನಿ ಏಲೋಹಿಮ್. "ನಮ್ಮ ದೇವರಾದ ಕರ್ತನು" ಹಾಗೂ ಇಸ್ರಾಯೇಲ್ಯರ ಪ್ರಾಮಾಣಿಕತೆ ಆತನೊಬ್ಬನಿಗೆ ಹೊರತು ಮತ್ತೆ ಯಾವ "ದೇವರಿಗೂ" ಅಲ್ಲ.

ವಾಗ್ದಾನ ಮಾಡಿದ ದೇಶಕ್ಕೆ ಪ್ರವೇಶವಾಗುವ ಮುನ್ನ ಮೋಶೆಯ ಪ್ರಥಮ ಭಾಷಣದಲ್ಲಿ ಇಸ್ರಾಯೇಲ್ಯರಿಗೆ ಕೊಟ್ಟ ಮೊದಲನೆ ಸಾಲು. ಈ ಸಾಲನ್ನು ಪ್ರಾರಂಭದಲ್ಲಿ "ಶಕ್ತಿಮಯವಾದ ಸತ್ಯವು ಪದ ವಿನ್ಯಾಸಗೊಂಡ ಈ ಸತ್ಯವು ಹಿಂದೆ ಹೇಗೆ ಇತ್ತೂ ಹಾಗೆಯೇ ಈಗಲೂ ಬಹಳ ಪ್ರಾಮುಖ್ಯವಾಗಿ ಉಳಿದಿದೆ.

**ಭಾನುವಾರ** **ಅಕ್ಟೋಬರ್ 17**

## ದೇವರನ್ನು ಪ್ರೀತಿಸುವುದು

ಮೋಶೆಯು ಇಸ್ರಾಯೇಲ್ ಜನರಿಗೆ ತಮ್ಮ ಇತಿಹಾಸವನ್ನು ವಿಸ್ತಾರವಾಗಿ ವರ್ಣಿಸಿದ ಮೇಲೆ ಅವರು ಪ್ರವೇಶ ಮಾಡಲು ಇರುವ ದೇಶದಲ್ಲಿ ಹೇಗೆ ಜೀವಿಸಬೇಕೆಂದು ಅವರಿಗೆ ಆದೇಶ ನೀಡಿದನು. ಒಬ್ಬನು ನಿಶ್ಚಯವಾಗಿ ವಾದಿಸಬಹುದು ಧರ್ಮೋಪದೇಶಕಾಂಡ ಪುಸ್ತಕವು ಆದೇಶದಿಂದ ತುಂಬಿದೆ ಎಂದು.

ಕೊನೆಯ ತನಕ ಒಡಂಬಡಿಕೆಗೆ ಹೇಗೆ ಬದ್ಧರಾಗಿರಲು ಸಾಧ್ಯ ಎಂದು ಕರ್ತನು ಜನರಿಗೆ ಏನು ಮಾಡಬೇಕೆಂದು ಹೇಳಿದನು.

ಆತನು ಅವರ ತಂದೆಗಳಿಗೆ ಮಾಡಿದ ವಾಗ್ದಾನವನ್ನು ನೆರವೇರಿಸಲು ಕೃಪ ಪೂರ್ಣನಾಗಿದ್ದನು.

ಧರ್ಮೋಪದೇಶಕಾಂಡ ಹೀಗೆ ಪ್ರಾರಂಭವಾಗುತ್ತದೆ. "ನೀವು ಹೊಳೆ ದಾಟಿ ಸ್ವತಂತ್ರಿಸಿಕೊಳ್ಳುವ ದೇಶದಲ್ಲಿ ಅನುಸರಿಸುವುದಕ್ಕಾಗಿ ನಿಮಗೆ ಬೋಧಿಸಬೇಕೆಂದು

ನಿಮ್ಮ ದೇವರಾದ ಯೆಹೋವನು ನನಗೆ ಆಜ್ಞಾಪಿಸಿದ ಧರ್ಮೋಪದೇಶವೂ, ವಿಧಿನಿರ್ಣಯಗಳೂ ಇವೇ. ನೀವು ನಿಮ್ಮ ಪುತ್ರ ಪೌತ್ರಾದಿ ಸಂತತಿಯವರೂ ಜೀವಮಾನದಲ್ಲೆಲ್ಲಾ ನಿಮ್ಮ ದೇವರಾದ ಯೆಹೋವನಲ್ಲಿ ಭಯಭಕ್ತಿಯುಳ್ಳವರಾಗಿದ್ದುಕೊಂಡು ನಾನು ಈಗ ಬೋಧಿಸುವ ಆತನ ವಿಧಿನಿರ್ಣಯಗಳನ್ನೆಲ್ಲಾ ಅನುಸರಿಸ–ಬೇಕೆಂದು ನೀವು ಬಹುಕಾಲ ಬಾಳಬೇಕೆಂದೂ ಇವುಗಳನ್ನು ಆಜ್ಞಾಪಿಸಿದ್ದಾನೆ (ಧರ್ಮೋಪದೇಶಕಾಂಡ 6:1,2).

ಧರ್ಮೋಪದೇಶಕಾಂಡ 6:4,5 ನ್ನು ಓದಿ. ಕರ್ತನಾದ ದೇವರು ಯಾವ ಆಜ್ಞೆಯನ್ನು ಇಸ್ರಾಯೇಲ್ ಜನರಿಗೆ 5ನೇ ವಚನದಲ್ಲಿ ಕೊಟ್ಟನು? ಅದು ಯಾವ ಅರ್ಥವನ್ನು ಕೊಡುತ್ತದೆ?

ನೀವು ನಿಮ್ಮ ದೇವರಾದ ಕರ್ತನನ್ನು ಪೂರ್ಣಹೃದಯದಿಂದ ಪ್ರೀತಿಸಬೇಕು...?

ಆಜ್ಞೆಗಳ ಮಧ್ಯದಲ್ಲಿ, ನಿಯಮಗಳ ಮಧ್ಯದಲ್ಲಿ ಹಾಗೂ ಎಚ್ಚರಿಕೆಗಳ ಮಧ್ಯದಲ್ಲಿ ದೇವರನ್ನು ಪ್ರೀತಿಸಲು ಜನರನ್ನು ದೇವರು ಕರೆಯುವುದು ಎಷ್ಟು ಮನೋಹರವಾಗಿದೆ. ಬರಿ ಪ್ರೀತಿ ಮಾಡುವುದು ಮಾತ್ರವಲ್ಲ. ಆದರೆ, ಅವರು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣಶಕ್ತಿಯಿಂದಲೂ ಎಂಬುವುದು ನಿರ್ಬಂಧವಿಲ್ಲದ ಪ್ರೀತಿಯ ಪ್ರವೃತ್ತಿಯನ್ನು ತೋರಿಸುತ್ತದೆ. ಕರ್ತನನ್ನು ಪೂರ್ಣ ಹೃದಯದಿಂದ ಪೂರ್ಣ ಪ್ರಾಣದಿಂದ ಪೂರ್ಣಶಕ್ತಿಯಿಂದ ಪ್ರೀತಿ ಮಾಡುವ ಅರ್ಥವೇನೆಂದರೆ ನಮ್ಮ ಪ್ರೀತಿಯು ಆತನಿಗೆ ಎಲ್ಲರಿಗಿಂತಲೂ, ಎಲ್ಲಾ ದಿಕ್ಕಿಂತಲೂ ಮಿಗಲಾಗಿರಬೇಕು. ಯಾಕೆಂದರೆ ಆತನ ನಮ್ಮ ಬುನಾದಿ ಮತ್ತು ನಮ್ಮ ಅಸ್ಥಿತ್ವಕ್ಕೆ ಆತನನ್ನು ಈ ರೀತಿ ಪ್ರೀತಿಸುವವರು ಎಲ್ಲದಕ್ಕೂ ಕ್ರಮಬದ್ಧವಾಗಿ ಪ್ರೀತಿಸತಕ್ಕದ್ದು. ಇಬ್ರಿಯದಲ್ಲಿ "ನಿನ್ನ" ಎಂಬ ಪದವು ನಿನ್ನ ದೇವರು, ನಿನ್ನ ಹೃದಯದಿಂದಲೂ, ನಿನ್ನ ಶಕ್ತಿಯಿಂದಲೂ ಎಂಬುವುದು ಏಕವಚನದಲ್ಲಿ ಹಾಗೂ ದೇವರು ಎಲ್ಲರನ್ನೂ ಉಪದೇಶಿಸಿ ಮಾತನಾಡಿದರೂ ಆದರೆ ಪರಿಪೂರ್ಣತೆಯು ಎಷ್ಟು ಬಲವಾಗಿದೆಯೋ ಅಷ್ಟೇ ವೈಯಕ್ತಿಕವಾಗಿದೆ. ಕರ್ತನು ಪ್ರತಿಯೊಬ್ಬರು ಆತನಿಗೆ ನಂಬಿಗಸ್ತರಾಗಿ ಬೇಕೆಂದು ಬಯಸುತ್ತಾನೆ. ಆ ನಂಬಿಗಸ್ತಿಕೆಯು ಆತನ ಪ್ರೀತಿಗೆ ಬುನಾದಿಯಾಗತಕ್ಕದ್ದು. ಯಾಕೆಂದರೆ ಆತನು ನಮಗಾಗಿ ಏನು ಮಾಡಿದ್ದಾನೆ ಮತ್ತು ಆತನು ಯಾರು ಎಂದು ತಿಳಿಸುತ್ತದೆ.

ನಿಮಗೆ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದ ಮತ್ತು ಪ್ರಾಣದಿಂದ ಮತ್ತು ಶಕ್ತಿಯಿಂದ ಪ್ರೀತಿಸತಕ್ಕದ್ದು ಯಾವ ಅರ್ಥವನ್ನು ಕೊಡುತ್ತದೆ?

**ಸೋಮವಾರ** **ಅಕ್ಟೋಬರ್ 18**

## ದೇವರಿಗೆ ಭಯಪಡು

ಮೋಶೆಯು ಇಸ್ರಾಯೇಲ್ಯರಿಗೆ ಹೇಳಿದ್ದು ನಿಮ್ಮಲ್ಲಿ ಇರುವ ಎಲ್ಲದರಲ್ಲೂ ದೇವರನ್ನು ಪ್ರೀತಿಸತಕ್ಕದ್ದು. ಇದು ಒಂದು ಆಜ್ಞೆಯಾಗಿತ್ತು. ಹೇಗೂ ಮೋಶೆಯು ಕೆಲವು ವಚನಗಳ ಪೂರ್ವದಲ್ಲಿ ಮತ್ತೊಂದು ಆಜ್ಞೆಯನ್ನು ಕೊಟ್ಟನು. "ನಿಮ್ಮ ದೇವರಾದ ಯೆಹೋವನಲ್ಲಿ ಭಯಭಕ್ತಿವರಾಗಿರಿ" (ಧರ್ಮೋಪದೇಶಕಾಂಡ 6:2).

ಧರ್ಮೋಪದೇಶಕಾಂಡ 10:12ಅನ್ನು ಓದಿ. ಈ ವಚನದಲ್ಲಿ ಪ್ರೀತಿ ಮತ್ತು ಭಯಭಕ್ತಿಯನ್ನು ಕುರಿತು ಹೇಳುವುದೇನು? ಮತ್ತು ಅದನ್ನು ಹೇಗೆ ಅರ್ಥೈಸಿಕೊಳ್ಳುತ್ತೀರಿ?

ಒಂದು ವಚನದಲ್ಲಿ ದೇವರಿಗೆ ಭಯಪಡಿರಿ ಎಂದು ಹೇಳದೆ ಮತ್ತೊಂದು ವಚನದಲ್ಲಿ ಆತನನ್ನು ಪ್ರೀತಿಸಿರಿ ಎಂದು ಹೇಳಿದೆ. ಆದರೆ ಈ ವಚನದಲ್ಲಿ ದೇವರಿಗೆ ಏಕೆ ಸಮಯದಲ್ಲಿ ಭಯಪಟ್ಟು ಆತನನ್ನು ಪ್ರೀತಿಸಿರೆಂದು ಹೇಳಿದೆ.

"ಭಯ" ಎಂಬ ಪದವು ಸರ್ವಸಾಮಾನ್ಯ ತಿಳುವಳಿಕೆಗೆ ವಿರೋಧೋಕ್ತವಾಗಿ ಕಾಣುತ್ತದೆ. ಆದರೆ ಆಗಲ್ಲ. ಬದಲಾಗಿ ದೇವರ ಭಯವು ಆತನು ಯಾರು ಮತ್ತು ಆತನ ಗಾಂಭೀರತೆಯನ್ನು ಮತ್ತು ಗೌರವವನ್ನು ಮತ್ತು ಅಧಿಕಾರವನ್ನು ಹಾಗೂ ಶಕ್ತಿಯನ್ನು ನೀತಿಯನ್ನು ಮತ್ತು ನ್ಯಾಯವನ್ನು ನಮಗೆ ಭಿನ್ನಭಾವವಾದ ಪಾಪಮಯವಾದ ಬಲಹೀನತೆ, ಮತ್ತು ಆತನ ಮೇಲೆ ಆತುಕೊಳ್ಳುವುದು ನಮ್ಮ ಸಹಜವಾದ ಪ್ರತಿಕ್ರಿಯೆ ಆಗತಕ್ಕದ್ದು. ನಾವು ದೇವರ ಆಜ್ಞೆಗಳನ್ನು ಉಲ್ಲಂಘಸಿ ಪಾಪಿಗಳಾದ ಪ್ರಯುಕ್ತವಾಗಿ ಆತನ ಕೃಪೆ ಇಲ್ಲದಿದ್ದರೆ ದಂಡನೆ ಮತ್ತು ನಿತ್ಯಮರಣಕ್ಕೆ ಪಾತ್ರರಾಗಬೇಕಿತ್ತು.

ಎಫೆಸದವರಿಗೆ 2:1–10 ಅನ್ನು ಓದಿ. ಈ ವಚನಗಳಲ್ಲಿ ಹೇಗೆ ನಾವು ಏಕಕಾಲದಲ್ಲಿ ದೇವರಿಗೆ ಭಯಪಟ್ಟು ಮತ್ತು ದೇವರನ್ನು ಪ್ರೀತಿಸುವುದು ಎಂದು ಅರ್ಥ ಮಾಡಿಕೊಳ್ಳಲು ಹೇಗೆ ಸಹಾಯ ಮಾಡುತ್ತದೆ?

ನಾವು "ಪಾಪದ ಮಕ್ಕಳು" ಆಗಿದ್ದ ಪ್ರಯುಕ್ತ (ಈ ಕಾರಣದಿಂದ ನಾವು ಆತನಿಗೆ ಭಯಪಡಬೇಕಾಗಿದೆ). ಕ್ರಿಸ್ತನು ನಮಗಾಗಿ ಸತ್ತು ನಮಗೆ ಹೊಸಜೀವವನ್ನು ನೀಡಿದ್ದಾನೆ. ಆದುದರಿಂದ ನಮಗೆ ಪೂರ್ವ ಪಾಪದಿಂದ ಮತ್ತು ದೋಷಾರೋಪಣೆ ಯಿಂದ ಬಿಡಿಸಿದ ಪ್ರಯುಕ್ತ (ನಾವು ಆತನನ್ನು ಪ್ರೀತಿಸಬೇಕು). ಇಂದು ನಮಗೆ ಹೇಗೆ ಅದು ನಿಜವಾಗಿದೆಯೋ ಅದೇ ತತ್ವವು ಪುರಾತನ ಇಸ್ರಾಯೇಲ್ಯರಿಗೂ ಅನ್ವಯವಾಗಿತ್ತು. ಅವರು ಐಗುಪ್ತದೇಶದಲ್ಲಿ ದಾಸರಾಗಿದ್ದರು. ಗುಲಾಮತ್ವಕ್ಕೆ ಮತ್ತು ಹಿಂಸೆಗೆ ಗುರಿಯಾಗಿದ್ದರು. ದೇವರ ಪ್ರೀತಿ ಮತ್ತು ಕೃಪೆ ಅವರ ಕಡೆ ಇದ್ದ ಪ್ರಯುಕ್ತ ಅವರಿಗೆ ಬಿಡುಗಡೆ ಆಯಿತು.

"ಐಗುಪ್ತ ದೇಶದಲ್ಲಿ ನೀವು ದಾಸತ್ವದಲ್ಲಿದದ್ದನ್ನು ನಿಮ್ಮ ದೇವರಾದ ಯೆಹೋವನು ಭುಜಪರಾಕ್ರಮದಿಂದಲೂ ಶಿಕ್ಷಾಹಸ್ತದಿಂದಲೂ ನಿಮ್ಮನ್ನು ಬಿಡುಗಡೆ ಮಾಡಿದ್ದನೂ ಜ್ಞಾಪಕ ಮಾಡಿಕೊಳ್ಳಿರಿ (ಧರ್ಮೋಪದೇಶಕಾಂಡ 5:15).

ಆಗ ಅವರು ಏಕಕಾಲದಲ್ಲಿ ದೇವರಿಗೆ ಭಯಪಟ್ಟು "ಮತ್ತು ಪ್ರೀತಿ ಮಾಡಿದರು. ಅವರು ಹಾಗೆ ಮಾಡಿದರೆ ನಾವು ಹೆಚ್ಚಿನ ಸತ್ಯವನ್ನು ತಿಳಿದವರಾಗಿ ಯೇಸುಕ್ರಿಸ್ತನು ಶಿಲುಬೆ ಮೇಲೆ ನಮಗಾಗಿ ಸತ್ತನು ಎಂಬ ಸತ್ಯವನ್ನು ತಿಳಿದವರಾದ ನಾವು ಇನ್ನೂ ದೇವರನ್ನು ಎಷ್ಟು ಪ್ರೀತಿ ಮಾಡತಕ್ಕದ್ದು?

ಪ್ರಕಟನೆ 14:6,7 ನ್ನು ಓದಿ. ಕರ್ತನ "ದೇವರಿಗೆ ಭಯಪಟ್ಟು" ಎಂಬ ಮೊದಲನೆ ಆಜ್ಞೆಯು ಲೋಕಕ್ಕೆ ಕೊನೆ ಕಾಲದ ಸಂದೇಶ ಎಂದು ಹೇಗೆ ಅರ್ಥೈಸಿಕೊಳ್ಳುವುದು?

**ಮಂಗಳವಾರ** **ಅಕ್ಟೋಬರ್ 19**

## ಆತನು ಮೊದಲು ನಮ್ಮನ್ನು ಪ್ರೀತಿಸಿದ

ಧರ್ಮೋಪದೇಶಕಾಂಡ ಪುಸ್ತಕದ ನಿಯಮಗಳ ಮತ್ತು ಕಾಯ್ದೆಗಳ ಮಧ್ಯದಲ್ಲೂ ಯೆಹೂದಿ ಜನಾಂಗದವರು ಎಲ್ಲಾ ಎಚ್ಚರಿಕೆಗಳ ಮಧ್ಯದಲ್ಲೂ ಆತನ ಆಜ್ಞೆಗಳಿಗೂ ಆತನ ನ್ಯಾಯತೀರ್ಪಿಗೂ ಆತನ ನಿಬಂಧನೆಗಳಿಗೂ ಜನರು ವಿಧೇಯರಾಗತಕ್ಕದ್ದು ಹಾಗೂ ಅವರು ದೇವರನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸಲು ಅವರೇ ಪ್ರಥಮ ಜನರಾಗಿದ್ದರು. ಈ ರೀತಿ ಪ್ರೀತಿ ಮಾಡಲು ಅವರಿಗೆ ಒಳ್ಳೆ ಕಾರಣವಿತ್ತು. ಧರ್ಮೋ 4:37, ಧರ್ಮೋ

7:7,8,13, ಧರ್ಮೋಪದೇಶಕಾಂಡ 10:15, ಧರ್ಮೋ 23:5 ಹಾಗೂ ಧರ್ಮೋ 33:3 ಅನ್ನು ಓದಿ. ಈ ವಚನಗಳಲ್ಲಿ ದೇವರ ಪ್ರೀತಿ ಬಗ್ಗೆ ತಿಳಿಸುವುದೇನು?

ಮೋಶೆಯು ಧರ್ಮೋಪದೇಶಕಾಂಡದಲ್ಲಿ ಪದೇ ಪದೇ ಜನರಿಗೆ ದೇವರು ಅವರ ತಂದೆಗಳಿಗೆ ಮತ್ತು ಅವರಿಗೆ ತೋರಿದ ಪ್ರೀತಿಯ ಬಗ್ಗೆ ಹೇಳಿದ. ಬರಿ ಮಾತಿಗಿಂತಲೂ ದೇವರು ತನ್ನ ಪ್ರೀತಿಯನ್ನು ಕೃತ್ಯದಲ್ಲಿ ಪ್ರಕಟಿಸಿದನು.

ಅವರಲ್ಲಿ ಲೋಪಗಳು ಮತ್ತು ವಿಫಲತೆಗಳು ಪಾಪಗಳು ಇದ್ದಾಗ್ಯೂ ಅವರಿಗೆ ದೇವರ ಪ್ರೀತಿ ಸ್ಥಿರವಾಗಿ ಉಳಿದಿತ್ತು. ಅವರ ಕೂಡ ದೇವರ ಪ್ರೀತಿಯು ಬಹಳ ಶಕ್ತಿಮಯವಾಗಿ ಅವರನ್ನು ನಡಿಸುವುದರಲ್ಲಿ ಪ್ರದರ್ಶನವಾಗಿತ್ತು.

ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ (1 ಯೋಹಾನ 4:9). ಈ ವಚನವು ದೇವರನ್ನು ಯಾಕೆ ಪ್ರೀತಿಸಬೇಕೆಂದು ಅರ್ಥಮಾಡಿಕೊಳ್ಳಲು ಹೇಗೆ ಸಹಾಯ ಮಾಡುತ್ತದೆ?

ನಾವು ಅಸ್ತಿತ್ವಕ್ಕೆ ಬರುವ ಮುನ್ನ ದೇವರ ಪ್ರೀತಿ ನಮ್ಮ ಮೇಲೆ ಇತ್ತು ಮತ್ತು ನಮ್ಮ ರಕ್ಷಣೆ ಯೋಜನೆಯು "ಜಗದುತ್ಪತ್ತಿಗೆ ಮೊದಲೇ" ಸ್ಥಾಪಿಸಲ್ಪಟ್ಟಿತ್ತು (ಎಫೆಸದವರಿಗೆ 1:4).

ಇ.ಜಿ. ವೈಟ್ ಹೇಳಿದ ಹಾಗೆ "ನಮ್ಮ ವಿಮೋಚನೆಯ ಯೋಜನೆಯು, ಆದಾಮನು ಪಾಪ ಮಾಡಿದ ಮೇಲೆ ದೇವರು ನಂತರ ಆಲೋಚಿಸಲಿಲ್ಲ. ಅನಾದಿಯಾಗಿ ಗುಪ್ತವಾಗಿದ್ದ ಮರ್ಮವು" (ರೋಮಾಪುರದವರಿಗೆ 16:25) ಪ್ರಕಟವಾಯಿತು.

ನಾವು ಎಷ್ಟು ಅದೃಷ್ಟವಂತರು ಏಕೆಂದರೆ ದೇವರು ಪ್ರೀತಿ ಸ್ವರೂಪಿ, ಆತನ ಪ್ರೀತಿ ಎಷ್ಟು ಶ್ರೇಷ್ಠ ಎಂದರೆ ನಮಗಾಗಿ ಶಿಲುಬೆ ಮೇಲೆ ತನ್ನ ಸ್ವತ್ಯಾಗ ಪ್ರೀತಿಯನ್ನು ತೋರಿಸಿದ "ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡು ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನು ಹೊಂದುವಷ್ಟು ವಿಧೇಯನಾದನು (ಫಿಲಿಪ್ಪಿಯನವರಿಗೆ 2:8).

ಇಸ್ರಾಯೇಲ್ ಮಕ್ಕಳು ಸಹಜವಾಗಿ ದೇವರ ಪ್ರೀತಿಯನ್ನು ಗ್ರಹಿಸಲಿಲ್ಲ. ಆದುದರಿಂದ ಇಂದು ದೇವರ ಪ್ರೀತಿ ನಮಗೆ ಪ್ರಕಟವಾಗಿದೆ. ದೇವರು ಪ್ರೀತಿ ಸ್ವರೂಪಿ ಆಗದೇ ದ್ವೇಷಿಸುವ ದೇವರಾಗಿದ್ದರೆ ಏನಾಗುತ್ತಿತ್ತು? ಲೋಕವು ಯಾವ

ತರವಾಗಿರುತ್ತಿತ್ತು. ದೇವರ ಪ್ರೀತಿಯು ಯಾವ ಕಾರಣಕ್ಕಾಗಿ ಪ್ರಕಟವಾಗಿತ್ತೋ ಅದರಲ್ಲಿ ನಾವು ಸಂತೋಷಿಸಬಹುದೆ?

**ಬುಧವಾರ** **ಅಕ್ಟೋಬರ್ 20**

## ನೀವು ನನ್ನನ್ನು ಪ್ರೀತಿಸುವುದಾದರೆ ನನ್ನ ಆಜ್ಞೆಯನ್ನು ಕೈಕೊಂಡು ನಡೆಯುವಿರಿ

ಇಸ್ರಾಯೇಲ್ ರಾಷ್ಟ್ರವನ್ನು ದೇವರು ಕರೆದದ್ದು ಆತನನ್ನು ಪ್ರೀತಿಸುವುದಕ್ಕಾಗಿ ಒಂದೊಂದಾಗಿ ಮಾತ್ರ ಇದು ಸಾಧ್ಯವಾಗಿತ್ತು. ಪ್ರತಿಯೊಬ್ಬ ಇಸ್ರಾಯೇಲನ್ನು ವೈಯಕ್ತಿಕವಾಗಿ ದೇವರನ್ನು ಪ್ರೀತಿಸಲು ಆಯ್ಕೆ ಮಾಡುವಉಚಿತ ಹಕ್ಕು ಕೊಡಲ್ಪಟ್ಟಿತ್ತು. ಆ ಪ್ರೀತಿಯನ್ನು ಅವರು ವಿಧೇಯತ್ವದಲ್ಲಿ ತೋರಿಸಬೇಕಾಗಿತ್ತು. ಈ ಕೆಳಗಿನ ವಚನಗಳಲ್ಲಿ ಸಾಮಾನ್ಯವಾಗಿ ಕಾಣುವ ಅಂಶಗಳು ಯಾವುದು? ಈ ವಚನಗಳಲ್ಲಿ ಸಾಮಾನ್ಯವಾಗಿ ಕಾಣುವ ವಿಷಯಗಳಾವುವು? ಧರ್ಮೋ 5:10.

ಧರ್ಮೋ 7:9

ಧರ್ಮೋ 10:12

ಧರ್ಮೋ 11:1

ಧರ್ಮೋ 19:9

ದೇವರ ವಾಕ್ಯವು ಇನ್ನೆಷ್ಟು ಸ್ಪಷ್ಟವಾಗಿರಬೇಕು?

ದೇವರು ಸುಮ್ಮನೆ ಪ್ರೀತಿಸುತ್ತೇನೆಂದು ಹೇಳದೆ ತನ್ನ ಪ್ರೀತಿಯನ್ನು ತಾನು ಮಾಡಿದ ಕಾರ್ಯದಲ್ಲಿ ಪ್ರಕಟಿಸಿದ್ದಾನೆ ಮತ್ತು ಇನ್ನೂ ಆ ಕಾರ್ಯದಲ್ಲಿ ಮಾಡುತ್ತಿದ್ದಾನೆ. ಅದೇ ರೀತಿ ದೇವಜನರು ಪ್ರೀತಿಯನ್ನು ಅವರ ಕೃತ್ಯದಲ್ಲಿ ದೇವರಿಗೆ ತೋರತಕ್ಕದ್ದು. ಈ ವಚನಗಳಲ್ಲಿ ಕಾಣುವುದೇನೆಂದರೆ ದೇವರ ಪ್ರೀತಿಯು ಆತನಿಗೆ ವಿಧೇಯರಾಗುವುದರಲ್ಲಿ ಜೋಡಣೆಯಾಗಿವೆ. ಆದಕಾರಣ ಯೋಹಾನನು ಹೀಗೆ ಹೇಳುತ್ತಾನೆ. ದೇವರ ಮೇಲಣ ಪ್ರೀತಿ ಏನೆಂದರೆ "ಆತನ ಆಜ್ಞೆಯನ್ನು ಕೈಕೊಂಡು ನಡೆಯುವುದೇ 1 ಯೋಹಾನ 5:3". ಅಥವಾ ಯೇಸುಸ್ವಾಮಿ ಹೇಳುವುದೇನೆಂದರೆ "ನೀವು ನನ್ನನ್ನು ಪ್ರೀತಿಸುವುದಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ? ಯೋಹಾನ 14:15 ಈ ವಚನಗಳು ಆತನ ಸರಳವಾದ ಬೋಧನೆಯನ್ನು ವ್ಯಕ್ತಪಡಿಸುತ್ತದೆ. ದೇವರಿಗೆ ಪ್ರೀತಿ ತೋರಿಸುವುದನ್ನು ಯಾವಾಗಲೂ ದೇವರಿಗೆ

ವಿಧೇಯರಾಗುವುದರಲ್ಲಿ ವ್ಯಕ್ತಪಡಿಸಬೇಕು ಅದು ಹಿಂದೆಯೂ ಇತ್ತು ಇನ್ನೆಂದೆಂದೂ ಹಾಗೆಯೇ ಇರುವುದು. ದೇವರಿಗೆ ವಿಧೇಯರಾಗಿರುವುದೆನ್ನುವುದರ ಅರ್ಥ ಆತನ ಆಜ್ಞೆಗ್ಗಳಿಗೆ ವಿಧೇಯರಾಗಿರುವುದು. ಆ ದಶಾಜ್ಞೆಗ್ಗಳು 4ನೇ ಆಜ್ಞೆಯನ್ನು ಒಳಗೊಂಡಿದೆ. ಅದು ಸಬ್ಬತ್ತು. ನಾಲ್ಕನೆಯ ಆಜ್ಞೆಯನ್ನು ಪಾಲಿಸುವುದು ಇತರ ಒಂಭತ್ತರಲ್ಲಿ ಯಾವುದನ್ನಾದರೂ ಇಟ್ಟುಕೊಳ್ಳುವುದಕ್ಕಿಂತ ಹೆಚ್ಚಿನ ಕಾನೂನು ಬದ್ಧತೆಯಲ್ಲ.

ಬೇರೆ ಯಾವುದೇ ಆಜ್ಞೆಗೆ ವಿಧೇಯರಾದರೆ ಕಾನೂನುಬದ್ಧವಾದರೆ ಅಂಥ ವಿಧೆಯತೆಯು ದೇವರಿಗೆ ನಿಜವಾದ ಪ್ರೀತಿಯಿಂದ ಮಾಡಿದಂತಲ್ಲ ವಿಶೇಷವಾಗಿ ಯೇಸುಕ್ರಿಸ್ತನು ನಮಗೆ ಮಾಡಿದಂತದನ್ನು. ನಾವು ಜ್ಞಾಪಕಕ್ಕೆ ತಂದು ನಾವು ನಿಜವಾಗಿ ದೇವರನ್ನು ಪ್ರೀತಿಸಿದರೆ ಆಗ ನಾವು ಆತನಿಗೆ ವಿಧೇಯರಾಗುತ್ತೇವೆ. ಯಾಕೆಂದರೆ ಅದನ್ನೇ ತಾನೇ ಆತನು ನಮ್ಮಿಂದ ಮಾಡಲು ಕೇಳುತ್ತಾನೆ.

ಮೋಶೆಯು ಇಸ್ರಾಯೇಲ್ಯರಿಗೆ ಪದೇ ಪದೇ ದೇವರನ್ನು ಪ್ರೀತಿಸಿ ಎಂದು ಹೇಳಿದಾಗ ಅವರು ಐಗುಪ್ತದಿಂದ ಬಿಡುಗಡೆ ಆದಮೇಲೆ ಹೇಳಿದ ದೇವರು ಅವರಿಗೆ ಕೊಟ್ಟ ವಿಮೋಚನೆ ಪ್ರತ್ಯುತ್ತರವಾಗಿ ದೇವರನ್ನು ಪ್ರೀತಿಸಿ ಮತ್ತು ಆತನಿಗೆ ವಿಧೇಯರಾಗುವುದು ಕರ್ತನಿಂದ ಅವರು ವಿಮೋಚಿಸಲ್ಪಟ್ಟವರು ಈಗ ನಂಬಿಗಸ್ತರಾಗಿ ಆತನ ಆಜ್ಞೆಗೆ ವಿಧೇಯರಾಗುವುದರಿಂದ ಪ್ರತ್ಯುತ್ತರ ತೋರಿಸಿದ್ದರು. ಇಂದು ಯಾವುದಾದರೂ ವ್ಯತ್ಯಾಸ ಇದೆಯೇ?

ದೇವರಿಗೆ ವಿಧೇಯರಾಗಲು ನಿಮ್ಮ ಸ್ವಂತ ಅನುಭವ ಏನು? ದೇವರಿಗೆ ವಿಧೇಯರಾಗಲು ನಿಮ್ಮ ಸ್ವಂತ ಉದ್ದೇಶವೇನು? ಯಾಕೆ ಅದನ್ನು ಪ್ರೀತಿಯಿಂದ ಮಾಡಬೇಕು? ಸತ್ಯವೇದದ ತಿಳುವಳಿಕೆ ಮೇರೆಗೆ ಭಯವು ಯಾವ ಪಾತ್ರವನ್ನು ಒಳಗೊಂಡಿದೆ?

**ಗುರುವಾರ** **ಅಕ್ಟೋಬರ್ 21**

# ಮೊದಲನೆ ಆಜ್ಞೆ

ಹೇಗೆ ಕೆಲವು ಕ್ರೈಸ್ತರು ಬೇರೆ ಬೇರೆ ಕಾರಣಕ್ಕಾಗಿ ಹಳೇ ಒಡಂಬಡಿಕೆಯಿಂದ ಹೊಸ ಒಡಂಬಡಿಕೆಯನ್ನು ಬೇರ್ಪಡಿಸಲು ಹುಡುಕುವರು. ಆದರೆ ಅದನ್ನು ಮಾಡಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ಹೊಸ ಒಡಂಬಡಿಕೆಯ ನಿಜವಾದ

ಅರ್ಥವನ್ನು ಬರಿದು ಮಾಡುತ್ತಾರೆ ಹೊಸ ಒಡಂಬಡಿಕೆಯು ಯೇಸುಕ್ರಿಸ್ತನ ಪ್ರಕಟಣೆ ಮತ್ತು ಯೇಸುಕ್ರಿಸ್ತನ ಜೀವನ ಮರಣ, ಪುನರುತ್ಥಾನ ಮತ್ತು ಮಹಾಯಾಜಕನ ಸೇವೆಯು ಹಳೆ ಒಡಂಬಡಿಕೆಯ ಪ್ರವಾದನೆಗಳ ಮತ್ತು ರೂಪಗಳ ನೆರವೇರಿಕೆಯು ವೇದಾಂತದಲ್ಲಿ ವಿವರಿಸಲಾಗಿದೆ. ಅನೇಕ ವಿಧಗಳಲ್ಲಿ ಹಳೇ ಒಡಂಬಡಿಕೆಯು ಹೊಸ ಒಡಂಬಡಿಕೆಗೆ ಹಿನ್ನೆಲೆಯು ಅದರ ಸನ್ನಿವೇಶಕ್ಕೆ ಬುನಾದಿಯೂ ಆಗಿದೆ. ಎರಡು ಒಡಂಬಡಿಕೆಗಳು ದೇವರ ಪ್ರೀತಿ ಮತ್ತು ಆತನ ಒಳ್ಳೇತನವನ್ನು ಪ್ರಕಟಿಸುತ್ತದೆ. ಈ ಒಂದು ಕಾರಣದಿಂದ ಯಾಕೆ ಯೇಸುಕ್ರಿಸ್ತನು ಪದೇ ಪದೇ ಹೊಸ ಒಡಂಬಡಿಕೆಯನ್ನು ಉಲ್ಲೇಖಿಸುತ್ತಾನೆ.

ಮಾರ್ಕನು 12:28–30 ಅನ್ನು ಓದಿ. ಮೊದಲನೆ ಆಜ್ಞೆಯನ್ನು ಕುರಿತು ಯಾವ ಪ್ರಶ್ನೆಯನ್ನು ಕೇಳಿದೆ? ಯೇಸು ಹೇಗೆ ಪ್ರತ್ಯುತ್ತರ ಮಾಡಿದ ಮತ್ತು ಆತನಿಗೆ ಉತ್ತರ ಎಲ್ಲಿಂದ ಸಿಗುತ್ತದೆ?

ಒಬ್ಬ ಶಾಸ್ತ್ರಿಯು ತನ್ನನ್ನು ಆಜ್ಞೆಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಹೇಗೆ ಜೀವನಕ್ಕೆ ಅಳವಡಿಸಿಕೊಳ್ಳುವುದೆಂದು ತನ್ನನ್ನು ಸಮರ್ಪಿಸಿದ ಈ ಪ್ರಶ್ನೆ ಕೇಳಿದ ಅನೇಕ ಆಜ್ಞೆಗಳಿಗೆ ಅವರು ವಿಧೇಯರಾಗಬೇಕೆಂದು ನಂಬಿದ್ದರು (ಯೆಹೂದಿಯರ ಸಂಪ್ರದಾಯದ ಮೇರೆಗೆ 613 ಆಜ್ಞೆಗಳಿವೆ) ಎಲ್ಲಾ ಆಜ್ಞೆಗಳು ಒಂದೇ ಪ್ರಶ್ನೆಗೆ ಇಳಿಸುತ್ತದೆ.

## ಯೇಸು ಏನು ಮಾಡುತ್ತಿದ್ದಾನೆ?

ನೇರವಾಗಿ ಧರ್ಮೋಪದೇಶಕಾಂಡ 6ನೇ ಅಧ್ಯಾಯದಿಂದ ಪ್ರಾರಂಭ ಮಾಡುತ್ತಾನೆ. "ಇಸ್ರಾಯೇಲ್ಯರೇ ಕೇಳಿರಿ, ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು" (ಧರ್ಮೋಪದೇಶಕಾಂಡ 6:4).

ಮತ್ತೆ ಮುಂದಿನ ವಚನವನ್ನು ಉಲ್ಲೇಖಿಸಿ "ನಿನ್ನ ದೇವರನ್ನು ಪೂರ್ಣ ಹೃದಯದಿಂದ, ಪೂರ್ಣಪ್ರಾಣದಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು. ನಿನ್ನ ಕರ್ತನಾದ ದೇವರು ಒಬ್ಬನೇ ದೇವರು ಎಂದು ದೃಢೀಕರಿಸಿ ಈ ಮಹಸತ್ಯದ ಮೇಲೆ ಆತುಕೊಂಡು ಆತನನ್ನು ಉನ್ನತವಾಗಿ ಪ್ರೀತಿಸಲು ಕರೆಯಲ್ಪಟ್ಟಿದ್ದಾರೆ.

ಈ ಆಜ್ಞೆಗಿಂತ ಯಾವ ಹೆಚ್ಚಿನ "ಪ್ರಸ್ತುತ ಸತ್ಯ" ಇದೆ? ಈ ಕೊನೆ ದಿನಗಳಲ್ಲಿ, ಅಂತಹ ಘಟನೆಗಳು ನೆರವೇರುವ ಸಮಯದಲ್ಲಿ ಎಲ್ಲರನ್ನೂ ಯಾವುದಾದರೂ ಒಂದು ಕಡೆ ಆಯ್ಕೆ ಮಾಡಿ ದೇವರ ಆಜ್ಞೆಗೆ ಮುಖ್ಯ ಪಾತ್ರವನ್ನು ಒಳಗೊಂಡಿದೆ (ಪ್ರಕಟನೆ 14:12).

ಅಂತಿಮವಾಗಿ, ಹಿಂಸೆಯ ಮಧ್ಯದಲ್ಲೂ ನಾವು ಯಾವ ಕಡೆ ಆರಿಸಿಕೊಳ್ಳುತ್ತೇವೆ ಅನ್ನುವುದು ದೇವರನ್ನು ನಿಜವಾಗಿಯೂ ಪ್ರೀತಿಸುತ್ತೇವೋ ಅಥವಾ ಇಲ್ಲವೋ ಎಂದು ತಿಳಿಸುತ್ತದೆ. ನಾವು ದೇವರನ್ನು ಪೂರ್ಣ ಹೃದಯದಿಂದಲೂ ಪ್ರಾಣದಿಂದಲೂ, ಶಕ್ತಿಯಿಂದಲೂ ಪ್ರೀತಿಸುವುದನ್ನು ನಿರ್ಣಯಿಸುತ್ತದೆ. ಆತನ ಒಳ್ಳೇತನ, ಪ್ರೀತಿ ಮತ್ತು ಕೃಪೆಯನ್ನು ನಮ್ಮಲ್ಲಿಯೇ ಅನುಭವಿಸಬೇಕು. ಅವಶ್ಯ ಬಿದ್ದರೆ ಆ ಪ್ರೀತಿಗಾಗಿ ನಾವು ಸಾಯಲು ಸಿದ್ಧವಾಗಿರಬೇಕು.

ಯಾರಾದರೂ ನಿಮ್ಮನ್ನು ಕೇಳಿದರೆ, ವೈಯಕ್ತಿಕವಾಗಿ ಕಣ್ಣಿಗೆ ಕಾಣದಿರುವ ದೇವರನ್ನು ಹೇಗೆ ಪ್ರೀತಿಸುವುದು? ಎಂದು ಕೇಳಿದರೆ ನೀವು ಏನು ಹೇಳುವಿರಿ? ನಿಮ್ಮ ತರಗತಿಯಲ್ಲಿ ನಿಮ್ಮ ಉತ್ತರಗಳನ್ನು ಚರ್ಚಿಸಿರಿ.

**ಶುಕ್ರವಾರ** **ಅಕ್ಟೋಬರ್ 22**

**ಹೆಚ್ಚಿನ ಆಲೋಚನೆಗಳು :** ಕ್ರಿಸ್ತನ ಕೃಜಿಯು ನಿತ್ಯತ್ವಕ್ಕೂ ವಿಮೋಚಿಸಲ್ಪಟ್ಟವರ ಅಧ್ಯಯನ ಮತ್ತು ಗಾನವಾಗುತ್ತದೆ. ಕೃಜೆಗೆ ಹಾಕಲ್ಪಟ್ಟ ಕ್ರಿಸ್ತನನ್ನು ಮಹಿಮೆ ಹೊಂದಿದ ಕ್ರಿಸ್ತನಾಗಿ ಕಾಣುವರು. ಯಾರ ಶಕ್ತಿಯಿಂದ ಅಸಂಖ್ಯವಾದ ಲೋಕಗಳು ಉಂಟಾದವೋ ಆತನನ್ನು ಮರೆಯಲು ಸಾಧ್ಯವಿಲ್ಲ.

ದೇವರಿಗೆ ಅತಿ ಪ್ರಿಯನು ಪರಲೋಕದ (ಘನತೆ) ಸಾರ್ವಭೌಮನು ಕೆರೂಬಿಯರು ಮತ್ತು ಪ್ರಕಾಶಮಾನವಾದ ಸೆರಾಫಿಯವರು ಆತನನ್ನು ಆರಾಧಿಸಲು ಆನಂದಿಸುವರು. ಅಂಥವನು ಪಾಪಕ್ಕೆ ಒಳಗಾದ ಮಾನವನನ್ನು ಮೇಲೆತ್ತಲು ತನ್ನನ್ನು ತಗ್ಗಿಸಿಕೊಂಡು ಅವರ ಪಾಪದ ಅಪರಾಧವನ್ನು, ಅವಮಾನವನ್ನು ಹೊತ್ತುಕೊಂಡನು. ಈ ಕಳೆದುಹೋದ ಲೋಕವನ್ನು ಕಲ್ವೇರಿಯ ಶಿಲುಬೆ ಮೇಲೆ ಅವರಿಗಾಗಿ ತನ್ನ ಹೃದಯವು ಒಡೆದು ತನ್ನ ದೇಹವು ಜಜ್ಜಲ್ಪಟ್ಟಿತ್ತು. ಈ ದೃಶ್ಯವನ್ನು ನೋಡಲಾರದ ತಂದೆ ದೇವರು, ತನ್ನ ಮುಖವನ್ನು ಮುಚ್ಚಿಕೊಂಡನು.

ಈ ಲೋಕವನ್ನೆಲ್ಲಾ ಉಂಟು ಮಾಡಿದಾತನು ಎಲ್ಲರ ಮಧ್ಯಸ್ಥನಾಗಿ ತನ್ನ ಮಹಿಮೆಯನ್ನು ಬದಿಗಿಟ್ಟು ತನ್ನನ್ನು ಮಾನವನ ಪ್ರೀತಿಗಾಗಿ ತಗ್ಗಿಸಿಕೊಂಡ ಪ್ರಯುಕ್ತವಾಗಿ ಇಡೀ ವಿಶ್ವವೇ ಆಶ್ಚರ್ಯದಿಂದ ಆತನನ್ನು ಸ್ತುತಿಸುವರು. ರಕ್ಷಿಸಲ್ಪಟ್ಟ ರಾಷ್ಟ್ರಗಳು ತನ್ನ ವಿಮೋಚಕನನ್ನು ನೋಡಿ, ತಂದೆಯ ಮಹಿಮೆಯು ಆತನ ಮುಖದಲ್ಲಿ ಪ್ರಕಾಶಿಸುವುದನ್ನು ನೋಡುವರು. ಆತನ ಸಿಂಹಾಸನವನ್ನು ಗಮನಿಸಿದಾಗ ಅದು ನಿತ್ಯ ನಿರಂತರಕ್ಕೂ ಇರುವಂಥದ್ದು. ಆತನ ರಾಜ್ಯಕ್ಕೆ ಅಂತ್ಯವಿಲ್ಲ. ಎಲ್ಲರೂ ಕೂಡಿ ಅತ್ಯಾನಂದದಿಂದ ಗೀತೆಯನ್ನು ಹಾಡುವರು. "**ವಧಿಸಲ್ಪಟ್ಟ ಕುರಿಮರಿಯೇ ನಿನ್ನೊಬ್ಬನೇ ಯೋಗ್ಯನು, ಯೋಗ್ಯನು ಮತ್ತು ನಮ್ಮನ್ನು ತನ್ನ ಸ್ವಂತ ಅಮೂಲ್ಯ ರಕ್ತದಿಂದ ವಿಮೋಚಿಸಿದನು**" ಎಂದು ಹಾಡುವರು (ಎಲೆನ್ ಜಿ ವೈಟ್, ಮಹಾಹೋರಾಟ ಪುಟ 651, 652).